UDAYAVANI Bangalore - 2 27/7/10

# ಯುಐಡಿ ಗುರುತಿನ ಚೀಟಿ ಯೋಜನೆ ರದ್ದಿಗೆ ಆಗ್ರಹ

ಬೆಂಗಳೂರು, ಜು. 26: ಕೇಂದ್ರ ಸರಕಾರ ಅನುಷ್ಠಾನಗೊಳಿಸಲು ಮುಂದಾಗಿರುವ 'ವಿಶಿಷ್ಟ ಗುರುತಿನ ಚೀಟಿ' (ಯುಐಡಿ) ಯೋಜನೆಯನ್ನು ಸಂಪೂರ್ಣ ರದ್ದುಪಡಿಸ ಬೇಕು ಎಂದು ಕನ್ಸರ್ನ್ಡ್ ಸಿಟಿಜನ್ ಅಂಡ್ ಇಂಡಿವಿಜುವಲ್ಸ್ ಗ್ರೂಪ್ಸ್ ಸಂಘಟನೆ ಸದಸ್ಯರಾದ ಕರ್ನಲ್ ಮ್ಯಾಥ್ಯೂ ಥಾಮಸ್, ಸಂಶೋಧಕ ವಿನಯ್ ಬೈಂದೂರು ಹಾಗೂ ಸೆಂಟರ್ ಫಾರ್ ಇಂಟರ್ನೆಟ್ ಅಂಡ್ ಸೊಸೈಟಿ ಆಡಳಿತಾಧಿಕಾರಿ ಅಜಯ್ ಸೋಮವಾರ ಒತ್ತಾಯಿಸಿದ್ದಾರೆ.

ಸಾರ್ವಜನಿಕ ಅಭಿಪ್ರಾಯ ಮತ್ತು ಸಂಸತ್ ಚರ್ಚೆಗೂ ಮಾನ್ಯ ಮಾಡದೇ ಜಾರಿಗೊಳಿಸಲು ಹೊರಟಿರುವ 'ಆಧಾರ್' ಹೆಸರಿನ ಈ ಯೋಜನೆ ಸಂಪೂರ್ಣ ಕಾನೂನುಬಾಹಿರವಾಗಿದ್ದು, ವಿದೇಶಿ ರಾಷ್ಟ್ರಗಳಿಗೆ ಅನುಕೂಲ ಕಲ್ಪಿಸುವ ಏಕೈಕ ಉದ್ದೇಶ ಹೊಂದಿದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ಸುಮಾರು 45,000 ಕೋಟಿ ರೂ. ಅಂದಾಜು ವೆಚ್ಚದೆಂದುಹೇಳಲಾಗುತ್ತಿರುವಈಯೋಜನೆಅಡಿಯಲ್ಲಿ ದೇಶದ ಇಡೀ ಜನ ಸಮುದಾಯವನ್ನು ತರಬಹುದು ಮತ್ತು ಇದರಿಂದ ಭಯೋತ್ಪಾದನೆ ನಿಗ್ರಹಿಸಬಹುದೆಂಬ ಕಲ್ಪನೆಯೇ ಅತ್ಯಂತ ಅಸ್ವಾಭಾವಿಕ. ಕೇಂದ್ರ ಸರಕಾರದ ಈ ಯೋಜನೆಯಿಂದ ದೇಶ ಖಂಡಿತಾ ಉದ್ಧಾರ ಆಗುವುದಿಲ್ಲ. ಬದಲಿಗೆ ಭಯೋತ್ಪಾದನೆಗೆ ಮತ್ತಷ್ಟು ಒತ್ತು ನೀಡಿದಂತಾಗುತ್ತದೆ ಎಂದು ಎಚ್ಚರಿಸಿದರು.

ಈ ಯೋಜನೆಯಡಿಯಲ್ಲಿ ಪ್ರತಿಯೊಬ್ಬರ ಹೆಸರಿಗೆ ಒಟ್ಟು 11 ಅಂಕೆಗಳನ್ನು ಒಳಗೊಂಡಿರುವ ಗುರುತಿನ ಸಂಖ್ಯೆ ನೀಡಿ, ಈ ಮೂಲಕ ಇಡೀ ದೇಶವನ್ನೇ ಭಯೋತ್ಪಾದನೆಯಿಂದ ಮುಕ್ತಗೊಳಿಸಬಹುದು ಎಂಬ ಧೋರಣೆಯೇ ಅತ್ಯಂತ ಹಾಸ್ಯಾಸ್ಪದವಾಗಿದೆ. ಅಲ್ಲದೇ, ಈ ಮೂಲಕ ಜನರಿಗೂ ಸುರಕ್ಷೆ ನೀಡಬಹುದೆಂಬ ನಿರೀಕ್ಷೆಯೂ ಹುಸಿಯಾಗಲಿದೆ ಎಂದು ಹೇಳಿದರು.

ಈ ಗುರುತಿನ ಸಂಖ್ಯೆ ಯೋಜನೆಯಲ್ಲಿ ಹೆಸರು, ವಿಳಾಸ ಸೇರಿದಂತೆ ವೈಯಕ್ತಿಕ ಬ್ಯಾಂಕ್ ಬ್ಯಾಲೆನ್ಸ್ನ್ನೂ ನಮೂದಿಸಲಾಗುತ್ತದೆ ಎನ್ನುವುದಾದರೆ ಇದರ ಅಗತ್ಯವೇನಿದೆ? ಇದರಿಂದ ವಿದೇಶಿ ರಾಷ್ಟ್ರಗಳಿಗೆ ಅಥವಾ ಭಯೋತ್ಪಾದಕರಿಗೆ ವೈಯಕ್ತಿಕವಾಗಿ ಮತ್ತಷ್ಟು ವಿವರಗಳನ್ನು ನೀಡಿದಂತಾಗುವುದಿಲ್ಲವೇ? ಎಂದು ಪ್ರಶ್ನಿಸಿದರು.

ಈ ಯೋಜನೆಯನ್ನು ಅನುಷ್ಠಾನಗೊಳಿಸುವ ದುರುದ್ದೇಶದಿಂದಲೇ ಸೆನ್ಸಸ್ ಕಾಯ್ದೆಗೆ ತಿದ್ದುಪಡಿ ತಂದು ಅದನ್ನು ಸಿಟಿಜನ್‌ಶಿಪ್ ಕಾಯ್ದೆಗೆ ವರ್ಗಾಯಿಸಲಾಗಿದೆ ಎಂದು ಆರೋಪಿಸಿದ ಅವರು, ಈ ಯೋಜನೆ ಅನುಷ್ಠಾನಕ್ಕೆ ಮುಂದಾಗಿದ್ದ ಇಂಗ್ಲೆಂಡ್‌ನ ನೂತನ ಸರಕಾರ ಕೂಡ ಈಗ ಇದನ್ನು ರದ್ದುಪಡಿಸಿದೆ ಎಂದರು.

ಕಾನೂನು ಮತ್ತು ನೀತಿ ಸಂಹಿತೆಯ ಉಲ್ಲಂಘನೆಗೆ ಪರಿಪೂರ್ಣ ಉದಾಹರಣೆ ಆಗಿರುವ ಯೋಜನೆ ಕೇವಲ ನಂದನ್ ನಿಲೇಕಣಿ ಮತ್ತು ಯೋಜನಾ ಆಯೋಗ ಅಧ್ಯಕ್ಷ ಅಹ್ಲುವಾಲಿಯಾ ಅವರ ವೈಯಕ್ತಿಕ ನಿರ್ಧಾರಕ್ಕೆ ಸಾಕ್ಷಿಯಾಗಿದೆ. ಇಂಥ ಯೋಜನೆ ಜನರಿಗೆ ಬೇಕಾಗಿಲ್ಲ. ಸಂಸತ್‌ನಲ್ಲಿ ಚರ್ಚೆಗೂ ಬಾರದಿರುವ ಈ ಯೋಜನೆಯನ್ನು ಕೂಡಲೇ ರದ್ದುಪಡಿಸಬೇಕು. ಇಲ್ಲದಿದ್ದಲ್ಲಿ ದೇಶಾದ್ಯಂತ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದರು.

ಪುಸ್ತಕ ಸಂಪದ: ಅಕ್ಷರ ಸಾಗರಕ್ಕೆ ಒಂದು ಪುಟ್ಟ ನಾವೆ - ಪ್ರತಿ ಶನಿವಾರ